**ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ**

**ಸಿಸಿ ನಂ. 535/2023**

**ಚಾಸಾಃ 2/ಪ್ರಾಸಾಃ 2**

**ದಿನಾಂಕಃ 08-10-2025**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| **ಸಾಕ್ಷಿದಾರರ ಹೆಸರು** | ಶಿವಾನಂದ ಹುಯಿಲಗೋಳ |
| ತಂದೆ/ಗಂಡನ ಹೆಸರು | ಸುರೇಶ |
| ವಯಸ್ಸು | 30 ವರ್ಷ |
| ಉದ್ಯೋಗ | ಖಾಸಗಿ ನೌಕರಿ |
| ವಾಸ | ನರಗುಂದ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಆರೋಪಿತನ ಪರಿಚಯ ಇಲ್ಲ. ಚಾಸಾ-3 ರವರ ಪರಿಚಯ ಇದೆ. ನಿಪಿಃ 1 ನೋಟಿಸ, ನಿಪಿಃ 3 ಶೋಧನಾ ವಾರೆಂಟ , ನಿಪಿಃ 4 ಸ್ಥಳ ಪಂಚನಾಮೆ ಮತ್ತು ನಿಪಿಃ 5 ಮಾದರಿ ಸೀಲು ನಕಲಿನ ಮೇಲೀರುವ ಸಹಿ ನನ್ನದೆ ಆಗಿವೆ. ಸಾಕ್ಷಿಯ ಸಹಿಗಳನ್ನು ನಿಪಿಃ 1(ಬಿ) , 3(ಬಿ), 4(ಬಿ), 5(ಬಿ) ಎಂದು ಗುರುತಿಸಲಾಯಿತು. ಆದರೆ ಸದರಿ ದಾಖಲೆಗಳಲ್ಲಿ ಬರೆದ ವಿಚಾರ ಗೊತ್ತಿಲ್ಲ. ಸುಮಾರು 18 ತಿಂಗಳ ಹಿಂದೆ ಅಬಕಾರಿ ಪೋಲಿಸರ ಕಚೇರಿಯಲ್ಲಿ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ಪೊಲೀಸರು ನನ್ನ  ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೆ ಮುದ್ದೇಮಾಲನ್ನು ಜಪ್ತ ಮಾಡಿರುವುದಿಲ್ಲ.  ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಪ್ರಾರ್ಥಿಸಿಕೊಂಡರು, ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಮಾನ್ಯ ಸಸಅ ರವರಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ**

ದಿ.28-08-2023 ರಂದು ಮುಂಜಾನೆ 6.30 ಗಂಟೆಯ ಸಮಯದಲ್ಲಿ ಹುಬ್ಬಳ್ಳಿ-

ಸೋಲಾಪೂರ ರಸ್ತೆಯಲ್ಲಿರುವ ರೋಣ ಕ್ರಾಸ ಹತ್ತಿರ ನಾನು ಮತ್ತು ಚಾಸಾ-3 ವ್ಯಾಯಾಮ ಮಾಡುತ್ತಿರುವಾಗ ಅಬಕಾರಿ ಪೊಲೀಸರು ನಮ್ಮನ್ನು ಕರೆದು, ಪರಿಚಯ ಮಾಡಿಕೊಂಡು, ಅಬಕಾರಿ ಗಸ್ತು ಮಾಡುತ್ತಿದ್ದು, ಆ ಸಮಯದಲ್ಲಿ ಅಬಕಾರಿ ಅಕ್ರಮ ಕಂಡು ಬಂದರೆ, ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ನಾವು ಒಪ್ಪಿದ್ದರಿಂದ ಪೋಲಿಸರು ನಮಗೆ ನಿಪಿಃ 1 ರಂತೆ ನೋಟಿಸ ನೀಡಿದ್ದಾರ ಎಂದರೆ ಸರಿಯಲ್ಲ. ಸದರಿ ನೋಟಿಸಗೆ ನಾನು ಸಹಿ ಮಾಡಿದ ನಂತರ ಅವರೊಂದಿಗೆ ಭೈರನಹಟ್ಟಿ ಮಾರ್ಗವಾಗಿ ಕೊಣ್ಣೂರು ಗ್ರಾಮದ ಮಾರ್ಗವಾಗಿ ಹೊರಟು ಕಪಲಿ, ಕಲ್ಲಾಪೂರಗಳಲ್ಲಿ ಗಸ್ತು ಕೆಲಸ ಮಾಡುತ್ತಾ ಶಿರೋಳ ಗ್ರಾಮಕ್ಕೆ 8.30 ಗಂಟೆಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಶಿರೋಳ ಗ್ರಾಮದಿಂದ ಕಿತ್ತಲಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಮಲಪ್ರಭಾ ನದಿಯ ಗಿಡಗಂಟೆಗಳ ಮರೆಯಲ್ಲಿ ವಾಹನವನ್ನು ಮರೆಯಲ್ಲಿ ನಿಲ್ಲಿಸಿ, ಪೋಲಿಸರು ವಾಹನ ತಪಾಸಣೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 9.15 ಗಂಟೆಗೆ ಅಪರಿಚಿತ ವ್ಯಕ್ತಿಯಿಂದ ಚಾಸಾ-1ರವರಿಗೆ ದೂರವಾಣಿ ಮೂಲಕ ಶಿರೋಳ ತಾಂಡಾದ ಸೋಮಲಪ್ಪ ಚವಾಣ ಇತನು ಸದರಿ ರಸ್ತೆಯಲ್ಲಿ ತನ್ನ ಕಪ್ಪು ಬಣ್ಣದ ಪಲ್ಸರ ಬೈಕನಲ್ಲಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಸಾಗಿಸುತ್ತಿರುವ ಬಗ್ಗೆ ಬಂದ ಮಾಹಿತಿಯನ್ನು ಸದರಿ ಅಧಿಕಾರಿಯು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಾಹಿತಿ ಪ್ರಕಾರ ಪೋಲಿಸರು ಗಸ್ತು ಕೆಲಸ ಮುಂದುವರೆಸಿದಾಗ 4-5 ನಿಮಿಷದ ನಂತರ ಒಂದು ಕಪ್ಪು ಬಣ್ಣದ ಬೈಕ ಕಿತ್ತಲಿ ಕಡೆಯಿಂದ ಬರುವುದನ್ನು ಕಂಡು ಪೋಲಿಸರು ವಾಹನ ನಿಲ್ಲಿಸಲು ಕೈ ಸನ್ನೆ ಮಾಡಿದಾಗ ಚಾಲಕನು 30 ಮೀ. ಅಂತರದಲ್ಲಿ ಹಿಂದೆ ವಾಹನ ನಿಲ್ಲಿಸಿ, ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನಮ್ಮ ಸಮಕ್ಷಮ ನಿಪಿಃ 3 ರಂತೆ ಶೋಧನಾ ವಾರೆಂಟ ತಯಾರಿಸಿಕೊಂಡು ಸದರಿ ಬೈಕನ್ನು ಪರಿಶೀಲನೆ ಮಾಡಿದಾಗ ಪೆಟ್ರೋಲ ಟ್ಯಾಂಕನ ಕವರಿನಲ್ಲಿ 1ಲೀ. ಸಾಮರ್ಥ್ಯದ ಬಾಟಲಿಯಲ್ಲಿ 1ಲೀ.ನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಬೈಕನ್ನು ಪರಿಶೀಲನೆ ಮಾಡಿದಾಗ ಅದರ ನೋಂದಣಿ ಸಂಖ್ಯೆ ಕೆಎ-26/ವಾಯ-7430 ಆಗಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಪೋಲಿಸರು ನಮ್ಮ ಸಮಕ್ಷಮ ಬೆಳಿಗ್ಗೆ 9.15 ರಿಂದ 10.45ರವರೆಗೆ ನಿಪಿಃ 4 ರಂತೆ ಸ್ಥಳ ಪಂಚನಾಮೆ ಜರುಗಿಸಿ ಸದರಿ ಬಾಟಲಿಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಮ್ಮ ಸಹಿ ಇರುವ ಚೀಟಿಯನ್ನು ಬಾಟಲಿಗೆ ಅಂಟಿಸಿ, ನಿಪಿಃ 5ರಂತೆ ಮಾದರಿ ಸೀಲು ನಕಲು ತಯಾರಿಸಿಕೊಂಡು ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ತಿಳಿದು, ನಿಪಿ-1 , 3 ರಿಂದ 5 ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾಳಿಯ ಸಮಯದಲ್ಲಿ ಓಡಿ ಹೋದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನಾಗಿದ್ದಾನೆ ಎಂದರೆ ಸರಿಯಲ್ಲ. ಪಂಚನಾಮೆ ಅಡಿಯಲ್ಲಿ ಜಪ್ತು ಮಾಡಿಕೊಂಡ ಬಾಟಲಿ ಈ ದಿನ ನ್ಯಾಯಾಲಯದ ಮುಂದೆ ಇರುವ ಬಾಟಲಿ ಆಗಿದೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ

ಆರೋಪಿತನಿಗೆ ಅನುಕೂಲ ಮಾಡಲು   ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ  ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ  ವಕೀಲರಿಂದಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ